# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **175** |
| ಸದಸ್ಯರ ಹೆಸರು | : | **ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)** |
| ಉತ್ತರಿಸುವ ದಿನಾಂಕ | : | **13/09/2022** |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ 3 ವರ್ಷಗಳಲ್ಲಿ ಎಷ್ಟು ಗ್ರಾಮ ಪಂಚಾಯಿತಿಗಳು ಪುರಸಭೆಗಳಾಗಿವೆ: (ಜಿಲ್ಲಾವಾರು ಮಾಹಿತಿ ಒದಗಿಸುವುದು)</td><td>ಕಳೆದ 3 ವರ್ಷಗಳಲ್ಲಿ ಗ್ರಾಮ ಪಂಚಾಯಿತಿಗಳನ್ನು ಪುರಸಭೆಗಳನ್ನಾಗಿ ಮೇಲ್ದರ್ಜೆಗೇರಿಸಿರುವ ಜಿಲ್ಲಾವಾರು ವಿವರ:
<table>
<tr><th>ಕ್ರ. ಸ.</th><th>ಜಿಲ್ಲೆಯ ಹೆಸರು</th><th>ಗ್ರಾಮ ಪಂಚಾಯಿಗಳ ಹೆಸರು</th><th>ಮೇಲ್ದರ್ಜೆಗೇರಿಸಲಾದ ವಿವರ</th></tr>
<tr><td>1.</td><td>ದಕ್ಷಿಣ ಕನ್ನಡ</td><td>ಸೋಮೇಶ್ವರ</td><td>ಸೋಮೇಶ್ವರ ಪುರಸಭೆ</td></tr>
<tr><td>2.</td><td>ಬೆಂಗಳೂರು ನಗರ</td><td>ಮಾದನಾಯಕನಹಳ್ಳಿ, ಮಾದವಾರ, ಸಿದ್ದನಹೊಸಹಳ್ಳಿ</td><td>ಮಾದನಾಯಕನಹಳ್ಳಿ ಪುರಸಭೆ (ಪ್ರಸ್ತುತ ಮಾದನಾಯಕನಹಳ್ಳಿ ಪುರಸಭೆಗೆ ಲಕ್ಷ್ಮೀಪುರ, ಚಿಕ್ಕಬಿದರಕಲ್ಲು ಹಾಗೂ ಶ್ರೀಕಂಠಪುರ ಗ್ರಾಮ ಪಂಚಾಯಿತಿಗಳು ಸೇರ್ಪಡೆಗೊಂಡು ಮಾದನಾಯಕನಹಳ್ಳಿ ನಗರಸಭೆಯಾಗಿ ಪರಿವರ್ತನೆ ಆಗಿರುತ್ತದೆ.)</td></tr>
<tr><td>3.</td><td>ಬೆಂಗಳೂರು ನಗರ</td><td>ಹುಣಸಮಾರನಹಳ್ಳಿ, ಸೊಣ್ಣಪನಹಳ್ಳಿ</td><td>ಹುಣಸಮಾರನಹಳ್ಳಿ ಪುರಸಭೆ</td></tr>
<tr><td>4.</td><td>ಬೆಂಗಳೂರು ನಗರ</td><td>ಚಿಕ್ಕಬಾಣಾವರ, ಸೋಮಶೆಟ್ಟಿಹಳ್ಳಿ</td><td>ಚಿಕ್ಕಬಾಣಾವರ ಪುರಸಭೆ</td></tr>
</table>
</td></tr>
<tr><td>ಆ</td><td>ಗ್ರಾಮ ಪಂಚಾಯತ್ ಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸಲು ಬೇಕಾದ ಜನಸಂಖ್ಯೆ ಎಷ್ಟು:</td><td>ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ–3 ರನ್ವಯ ಗ್ರಾಮ ಪಂಚಾಯಿತಿಗಳನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸುವಾಗ ಮೇಲ್ದರ್ಜೆಗೇರಿಸಲಾಗುವ ಪ್ರದೇಶದ</td></tr>
</table>

| | | |
|---|---|---|
| | | ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು. |
| ಇ | ಗ್ರಾಮ ಪಂಚಾಯತ್ ಗಳನ್ನು ಪುರಸಭೆಯನ್ನಾಗಿ ಪರಿಗಣಿಸಿದ ಬಳಿಕ ಚುನಾವಣೆ ನಡೆಸಲು ಬೇಕಾಗಿರುವ ಕಾಲಾವಧಿ ಎಷ್ಟು? (ವಿವರವಾದ ಮಾಹಿತಿ ಒದಗಿಸುವುದು) | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ–357 ರನ್ವಯ ಪಂಚಾಯಿತಿ ಪ್ರದೇಶವನ್ನು ಪುರಸಭೆ/ ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಿದಾಗ, ಪಂಚಾಯಿತಿ ಸದಸ್ಯರಾಗಿದ್ದು ಹುದ್ದೆ ತೆರವು ಮಾಡುವ ವ್ಯಕ್ತಿಗಳನ್ನು ಒಳಗೊಂಡ ಮಧ್ಯಕಾಲಿಕ ಕೌನ್ಸಿಲನ್ನು ರಚಿಸಲಾಗುತ್ತದೆ ಮತ್ತು ಆ ಗ್ರಾಮ ಪಂಚಾಯಿತಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಮಧ್ಯಕಾಲಿಕ ಮುನ್ಸಿಪಲ್ ಕೌನ್ಸಿಲ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರೆಂದು ಭಾವಿಸಬೇಕಾಗಿರುತ್ತದೆ.<br><br>ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ–358 ರನ್ವಯ ಮಧ್ಯಕಾಲಿಕ ಮುನ್ಸಿಪಲ್ ಕೌನ್ಸಿಲ್ ರಚಿಸಿದ ದಿನಾಂಕದಿಂದ ಆರು ತಿಂಗಳುಗಳನ್ನು ಮೀರದ ಅವಧಿಯೊಳಗೆ ಹೊಸ ಮುನ್ಸಿಪಲ್ ಕೌನ್ಸಿಲ್ ರಚನೆಗೆ ಚುನಾವಣೆ ನಡೆಸಲು ನಿಯಮಾನುಸಾರ ಕ್ರಮಕ್ಕೈಗೊಳಲಾಗುತ್ತಿದೆ. |

**ಸಂಖ್ಯೆ:ನಅಇ 38 ಎಲ್‌ಸಿಕ್ಯೂ 2022.**

(ಎನ್. ನಾಗರಾಜು–ಎಂ ಟಿ ಬಿ)
**ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ**
**ಸಾರ್ವಜನಿಕ ಉದ್ದಿಮೆಗಳ ಸಚಿವರು**